ಆ) ಸರ್ವೆ ಮುಗಿಯದಿದ್ದಲ್ಲಿ, ಯಾವಾಗ ಸರ್ವೆ ಪೂರ್ಣ ಮಾಡಲಾಗುವುದು;

ಇ) ಸರ್ವೆ ಕಾರ್ಯ ಮುಗಿದಿದ್ದಲ್ಲಿ ಕೆಲಸವನ್ನು ಪ್ರಾರಂಭ ಮಾಡದಿರಲು ಕಾರಣವೇನು;

ಈ) ಇದು ಯಾವ ಹಂತದಲ್ಲಿದೆ, ಯಾವಾಗ ಕೆಲಸ ಪ್ರಾರಂಭಿಸಲಾಗುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಮುಗಿದಿದೆ.

ಆ) ಉದ್ಭವಿಸುವುದಿಲ್ಲ.

ಇ) ಮತ್ತು ಈ) ಈ ಯೋಜನೆಯ ಪ್ರಾಥಮಿಕ ವರದಿಯನ್ನು ಕಾವೇರಿ ಜಲಾನಯನ ಪ್ರತ ನೀರಾವರಿ ನಿಗಮವು ತಯಾರಿಸಿದ್ದು ಈ ಯೋಜನೆಗೆ ಬೇಕಾಗುವ ನೀರೆತ್ತುವ ಪರವಾನಗಿ ಕೊಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ನೀರಿನ ಪರವಾನಿಗೆ ದೊರೆತ ನಂತರ ಮತ್ತು ಆರ್ಥಿಕ ಸಂಸ್ಥೆಯಿಂದ ಸಾಲ ಸೌಲಭ್ಯ ದೊರೆತ ನಂತರ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಹೇಮಾವತಿ ನಾಲೆಯ ಹಣದ ಅವ್ಯವಹಾರ

1178 (1768): ಶ್ರೀ ಎನ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೇಮಾವತಿ ನಾಲೆಯ ಎನ್.ಬಿ.ಸಿ. 35 ಕಿ.ಮೀ.ನಿಂದ 45 ಕಿ.ಮೀ.ವರೆಗೆ ಸರಿಯಾಗಿ ಕೆಲಸವಾಗದೆ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದರೆ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಇಲ್ಲ.

ಆ) ಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೇಮಾವತಿ ನಾಲೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ಕೊಳ್ಳುವಲ್ಲಿ ಅವ್ಯವಹಾರ

1179 (1769): ಶ್ರೀ ಎನ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುರುವೇಕೆರೆ ಹೇಮಾವತಿ ನಾಲೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ವಿಭಾಗದಲ್ಲಿ ಸಾಮಗ್ರಿಗಳನ್ನು ಕೊಳ್ಳುವುದರಲ್ಲಿ ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಕಳೆದ ಮೂರು ವರ್ಷಗಳಿಂದ ಕೊಂಡಿರುವ ಸಾಮಗ್ರಿಗಳಾವುವು;

ಇ) ಸಾಮಗ್ರಿಗಳನ್ನು ಕೊಳ್ಳಲು ಖರ್ಚು ಮಾಡಿರುವ ಹಣವೆಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–